ಬೇಡ. ಹಿಂದೆ ೧೯೬೮ ರಲ್ಲಿ ಇಂತಹ ವಿಷಯ ಪ್ರಸ್ತಾಪ ಬಂದಿದ್ದಾಗ ಇದಕ್ಕೆ ಒಂದು ಕಮಿಟಿ ಮಾಡಿತ್ತು. ಆ ಕಮಿಟಿಯವರು ರಿಪೋರ್ಟ್ ಕೊಟ್ಟಮೇಲೆ ತೀರ್ಮಾನ ಮಾಡೋಣ ಅಂತ ಮಾಡಿದ್ದರು. ಆ ಕಮಿಟಿ ಮೀಟಿಂಗ್ ಸೇರಿತ್ತೋ ಇಲ್ಲವೋ ಗೊತ್ತಿಲ್ಲ. ನಾವೇನೂ ಇದರ ಬಗ್ಗೆ ಕೇಳಿಲ್ಲ. ಅವರು ನಮ್ಮನ್ನು ಕರೆದು ಕನಸಲ್ಟ್ ಮಾಡೂ ಇಲ್ಲ. ನೀವೇ ಈ ಬಿಲ್ಲನ್ನು ತಂದಿರಿ, ನೀವೇ ಇದನ್ನು ಕೈಬಿಟ್ಟಿರಿ. ನಾವೇನೂ ಇದರ ಬಗ್ಗೆ ಅಂಗಲಾಚಿಕೊಂಡು ಕೇಳಿಲ್ಲ. ಪತ್ರಿಕೆಯಲ್ಲಿ ಈ ರೀತಿ ಬಂದಿರುವುದರಿಂದ ಆ ವಿಷಯವನ್ನು ಕ್ಲಾರಿಫೈ ಮಾಡಬೇಕೆಂದು ತಮ್ಮ ಅನುಮತಿ ಪಡೆದು ಮಾತನಾಡುವುದಕ್ಕೆ ಅವಕಾಶ ಕೇಳಿದೆ.

Supply of rotten wheat at Arsikere.

ಶ್ರೀ ಹೆಚ್. ಎಸ್. ಸಿದ್ದಪ್ಪ (ಅರಸೀಕೆರೆ) ಅಧ್ಯಕ್ಷರ ಮಂಪಾಂತರ ಆಹಾರ ಸಚಿವೆಯವರ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ನಮ್ಮ ತಾಲ್ಲೂಕಿನಲ್ಲಿ, ಅರಸೀಕೆರೆಯಲ್ಲಿ ಹುಳ ಬಿದ್ದಂಥ ಗೋಧಿಯನ್ನು ಹಂಚುತ್ತಿದ್ದಾರೆ ಇದರ ಬಗ್ಗೆ ಸಹಾಯ ಮಾಡಿ ಮಂತ್ರಿಗಳಿಗೆ ನಿನ್ನೆ ದಿವಸ ಒಂದು ಪತ್ರ ಕಳುಹಿಸಿದ್ದೇನೆ. ಮಾನ್ಯ ಮಂತ್ರಿಗಳು it is under consideration ಎಂದು ಹೇಳಿದರು. ಆ ಷಾಪ್‌ಗಳ ಹುಳ ಬಿದ್ದಿರುವ ಗೋಧಿಯನ್ನು ತೆಗೆದುಕೊಂಡರೆ ಸಕ್ಕರೆ ಕೊಡುತ್ತಾರೆ, ಇಲ್ಲದಿದ್ದರೆ ಕೊಡುವುದಿಲ್ಲ ಇದರ ಬಗ್ಗೆ ಜನರು ಕಣ್ಣೀರು ಇಡುತ್ತಿದ್ದಾರೆ. ಸಕ್ಕರೆ ಬೇಕಾದರೆ ಗೋಧಿ ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡುತ್ತಿದ್ದಾರೆ. ಆ ಜನರು ಈ ಹುಳ ಬಿದ್ದಿರುವ ಗೋಧಿಯನ್ನು ತೆಗೆದುಕೊಂಡು ತಿನ್ನಬೇಕಾದ ಪರಿಸ್ಥಿತಿ ಬಂದಿದೆ. ಇದರಿಂದ ಅವರ ಆರೋಗ್ಯ ಕೆಡುತ್ತದೆ. ಆದುದರಿಂದ ನಾನು ಅಹಂರ ಸಚಿವೆಯಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹುಳ ಬಿದ್ದಿರುವ ಗೋಧಿಯನ್ನು ತೆಗೆದುಕೊಳ್ಳುವುದಕ್ಕೆ ಒತ್ತಾಯ ಮಾಡಬಾರದು ಎಂದು ತಿಳಿಸಬೇಕು ಎಂದು ಹೇಳುತ್ತೇನೆ. ಅಲ್ಲಿ ಒಳ್ಳೆಯ ಗೋಧಿಯನ್ನು ಕೊಡಿಸುವುದಕ್ಕೆ ಸಹಾಯ ಮಾಡುತ್ತೀರಾ? ಆ ಗೋಧಿಯನ್ನು ಬೇಕಾದರೆ ಬೆಂಗಳೂರಿಗೆ ತರಿಸಿ ಕೆಮಿಕಲ್ ಎಕ್ಸಾಮಿನ್ ಮಾಡಿಸಿ. ಅದರ ಬಗ್ಗೆ ತನಿಖೆ ನಡೆಸುತ್ತೀರಾ? ಅಲ್ಲಿ ಒಳ್ಳೆಯ ಗೋಧಿಯನ್ನು ಕೊಡುವಂತೆ ಏರ್ಪಾಡು ಮಾಡಿ ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Rise in Prices of Foodgrains in the State

ಶ್ರೀ ಎಚ್. ಡಿ. ದೇವೇಗೌಡ.—ಈ ಸಂದರ್ಭದಲ್ಲಿ ಒಂದು ವಿಷಯವನ್ನು ಆಹಾರ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರಿನಲ್ಲಿರುವ ಪರಿಸ್ಥಿತಿಯ ಬಗ್ಗೆ ಒಂದು ಹೇಳಿಕೆ ಕೊಡಬೇಕೆಂದು ಮಾನ್ಯ ಸದಸ್ಯರಾದ ನಾಗಣ್ಣ ಅವರು ಕೇಳಿದರು. ಈ ಹೊತ್ತು ಸಭೆಯು ಕಾರ್ಯಾಕಲಾಪಗಳನ್ನು ಮುಂದುವರಿಸುವವರಿದ್ದೀರಿ. ರಾಜ್ಯಾದ್ಯಂತ ಏನಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದರ ಬಗ್ಗೆ ಕ್ರಮ ತಗದುಕೊಳ್ಳಬೇಕು. ಆಹಾರ ಪದಾರ್ಥಗಳ ಧಾರಣೆ ಗಗನವನ್ನು ಮುಟ್ಟುತ್ತಿದೆ. ಹಿಂದು ಕೆ ಜಿ. ಜೋಳದ ಬೆಲೆ ೧-೪೦, ೧-೫೦ರ ವರೆಗೂ ಹೋಗಿದೆ. ಹಿಂದು ಕೆ. ಜಿ. ಅಕ್ಕಿಯ ಬೆಲೆ ೧-೬೯ರ ವರೆಗೂ ಹೋಗಿದೆ. ನಮ್ಮ ಕಂದಾಯ ಮಂತ್ರಿಗಳು ಅಧಿಕಾರ ಸ್ವೀಕಾರ ಮಾಡಿದ ಪ್ರಥಮದಲ್ಲಿ ಹೆಚ್ಚು ಮಳೆ ಕೆಲವು ಕಡೆ ಆಯಿತು. ಮತ್ತೆ ಮಳೆ ಕೈ ಕೊಟ್ಟಿತು ಮತ್ತು ಸದ್ಯದಲ್ಲಿ ಮಳೆ ಬರುವ ಪರಿಸ್ಥಿತಿ ಕಾಣುತ್ತಿಲ್ಲ. ರಾಜ್ಯದೊಳಗೆ ಅಭಾವ ಪರಿಸ್ಥಿತಿ ಎಲ್ಲ ಕಡೆಯೂ ಪ್ರಾರಂಭವಾಗಿದೆ. ಆದ್ದರಿಂದ ಇದರ ಕಡೆಗೆ ಹೆಚ್ಚು ಗಮನ ಕೊಡಬೇಕು. ದಾಸ್ತಾನು ಇಟ್ಟಿದ್ದ ಗೋಧಿಯನ್ನು ಹಂಚುವುದಕ್ಕೆ ಬಿಡುಗಡೆ ಮಾಡದೆ ಅದು ಹುಳಿತು ಹೋಗುತ್ತಿದೆ. ಇನ್ನೊಂದು ಕಡೆ ಧಾರಣೆಗಳು ಗಗನವನ್ನು ಮುಟ್ಟಿ ಕೊಳ್ಳುವವರ ಪರಿಸ್ಥಿತಿ ಚಿಂತಾಜನಕವಾಗಿದೆ. ಸರ್ಕಾರದಲ್ಲಿ ಇರುವ ದಾಸ್ತಾನು ನ್ಯಾಯಬೆಲೆ ಅಂಗಡಿಗಳ ಮೂಲಕ ಉಪಯೋಗಿಸುವುದಕ್ಕೆ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಹಂಚುವುದಕ್ಕೆ ಬಿಡುಗಡೆ ಮಾಡಿ ಧಾರಣೆಯನ್ನು ಹತ್ತಿಕ್ಕಬೇಕು. ಇದರ ಕಡೆಗೆ ಕೂಡ ಗಮನ ಕೊಡಬೇಕು, ಬಾಧ್ಯಸ್ಥ ವ್ಯಾಪಾರರು ಈಗಿನ ಪರಿಸ್ಥಿತಿಯನ್ನು ದುರುಪಯೋಗ ಮಾಡಿಕೊಂಡು ಲಾಭವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿರುವುದು ನಮಗೆ ಗೊತ್ತಿರುವ ವಿಚಾರ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

Inadequate Water and Cantteen arrangements at the Ganeral Hostel

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) —ಮಾನ್ಯ ಅಧ್ಯಕ್ಷಣಿಯವರೇ ಈ ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಬಾರದು ಎಂದು ಮೂರು ದಿವಸದಿಂದ ತಡೆಹಿಡಿದುಕೊಂಡಿದ್ದೆ. ದಕ್ಷತೆಗೆ ಹೆಸರಾದ ಶ್ರೀ ಚನ್ನಬಸಪ್ಪನವರು ಇಲ್ಲಿದ್ದಾರೆ, ಅವರಿಗೆ ಸೇರಿದ ಇಲಾಖೆಯು ವಿಷಯ. ಕಳೆದ ಮೂರು ದಿವಸಗಳಿಂದಲೂ ಜನರಲ್ ಹಾಸ್ಟಲಿನಲ್ಲಿರುವ ೮೦ ಜನ ಶಾಸಕರಿಗೆ ನೀರಿನ ವಿಷಯದಲ್ಲಿ ತುಂಬ ತೊಂದರೆ ಆಗಿದೆ. ನಾನು ತಮ್ಮ ಹತ್ತಿರ ಮತ್ತು ಕಾರ್ಯದರ್ಶಿಯವರ ಹತ್ತಿರ ಹೇಳಿದೆ. ಸಂಬಂಧಪಟ್ಟ

(ಶ್ರೀ ಕೋಣಂದೂರು ಲಿಂಗಪ್ಪ)

ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೂ ಹೇಳಿದ್ದೇವೆ. ಮೊನ್ನೆಯ ದಿನ ಏನೋ ತೊಂದರೆ ಇದ್ದು ನೀರುನಿಂತು ಹೋಯಿತು ಎಂದು ಇದ್ದೆವು. ನಿನ್ನೆಯೂ ನೀರಿನ ತೊಂದರೆ ತಪ್ಪಲಿಲ್ಲ. ಈ ಹೊತ್ತು ಸಹ ನೀರು ಬರಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದರ ಮೂಲಕ ತಕ್ಕ ಕ್ರಮ ತೆಗೆದು ಕೊಳ್ಳಬೇಕು. ನಾವು ಅಧಿಕಾರಿಗಳನ್ನು ಕಾಂಟ್ಯಾಕ್ಟ್ ಮಾಡಿ ಸಾಕಷ್ಟು ಸಲ ಹೇಳಿದ್ದೇವೆ, ಇಲ್ಲಿಯವರೆಗೂ ಸಹಿಸಿಕೊಂಡಿದ್ದೇವೆ. ಈಗಲಾದರೂ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ.— ಇಲ್ಲಿರುವ ಪರಿಸ್ಥಿತಿ ಏನೆಂದರೆ ಬೆಂಗಳೂರು ವಾಟರ್ ಸಪ್ಲೈ ಬೋರ್ಡಿನವರು ಎಷ್ಟು ಚೊಕ್ಕವಾಗಿ ಕೆಲಸ ಮಾಡುತ್ತಾರೆ ಎನ್ನುವುದರ ಮೇಲೆ ಅವಲಂಬಿಸಿದೆ. ಹೊರಗಡೆಯಿಂದ ಸ್ಟೋರೇಜ್ ಟ್ಯಾಂಕಿನಿಂದ ಲಾರಿಯಲ್ಲಿ ನೀರನ್ನು ತೆಗೆದುಕೊಂಡು ಬಂದು ಮತ್ತೆ ಪಂಪ್ ಮಾಡ ಬೇಕು. ಅಸಿಸ್ಟೆಂಟ್ ಇಂಜಿನಿಯರಿಗೆ ಫೋನ್ ಮಾಡಿದ ಮೇಲೆ ಆರು ದಿವಸಕ್ಕೆ ಲಾರಿ ಬರುತ್ತದೆ. ಒಬ್ಬೊಬ್ಬರಿಗೆ ಕೋ ಆರ್ಡಿನೇಷನ್ ಇಲ್ಲ. ಈ ದಿನ ಬೆಳಿಗ್ಗೆ ಶ್ರೀ ಕೋಣಂದೂರು ಲಿಂಗಪ್ಪನವರು ಅವರ ಕೋಪದಲ್ಲಿ ಯಾರಾದರೂ ಸಿಕ್ಕಿದ್ದರೆ ಹೊಡೆಯುತ್ತಿದ್ದರೋ ಏನೋ ಎಂದು ಕಾಣುತ್ತದೆ. ಹಿಂದೆ ಶಾಸಕರ ಭವನದಲ್ಲಿ ಸಿಬ್ಬಂದಿ ಸರಿಯಾದ ರೀತಿ ಕೆಲಸ ಮಾಡಲಿಲ್ಲವೆಂದು ಪರಿಸ್ಥಿತಿ ಸ್ವಲ್ಪ ವಿಕೋಪಕ್ಕೆ ಹೋದದ್ದು ತಮ್ಮ ಗಮನಕ್ಕೆ ಬಂದಿದೆ. ಮನುಷ್ಯನಿಗೆ ತಾಳ್ಮೆಗೂ ಒಂದು ಮಿತಿ ಇರುತ್ತದೆ. ಟೆಲಿ ಫೋನ್ ಆಪರೇಟರುಗಳಿಗೆ ಕೈ ಮುಗಿಯಬೇಕು ಎಂದರೆ ಸಾಧ್ಯವೇ? ಹೊರಗಡೆಯಿಂದ ಕಾಲ್ ಬಂದರು ಎಂಗೇಜ್ಡ್, ಒಳಗಡೆಯಿಂದ ಮಾಡಬೇಕಾದರೂ ಎಂಗೇಜ್ಡ್ ಎಂದು ಹೇಳುತ್ತಾರೆ. ಸದಸ್ಯರ ಮನಸ್ಸಿನ ಮೇಲೆ ಅತಿರೇಕದ ಪರಿಸ್ಥಿತಿಯುಂಟಾಗುತ್ತಿದೆ. ದಯಮಾಡಿ ಇದರ ಕಡೆಗೆ ಹೆಚ್ಚಿನ ನಿಗಾ ಕೊಡಬೇಕು.

ಜನರಲ್ ಹಾಸ್ಟಲಿನಲ್ಲಿರುವ ಸದಸ್ಯರಿಗೆ, ಹೊರಗಡೆಯಿಂದ ಲಾರಿಯಲ್ಲಿ ನೀರು ಬಂದು ಸ್ಟೋರೇಜ್ ಟ್ಯಾಂಕಿಗೆ ಪಂಪ್ ಮಾಡಬೇಕು. ಇದು ಸಕಾಲದಲ್ಲಿ ಆಗದೆ ಹೋದರೆ ಇಂಥ ಪರಿಸ್ಥಿತಿಯುಂಟಾಗುತ್ತದೆ. ದಯಮಾಡಿ ಇದರ ಬಗ್ಗೆ ಹೆಚ್ಚು ಗಮನ ತೆಗೆದುಕೊಳ್ಳಬೇಕು.

ಕ್ಯಾಂಟೀನ್ ವ್ಯವಸ್ಥೆ ಸರಿಯಿಲ್ಲ. ಸುದರ್ಶನದಲ್ಲಿ ಉತ್ತಮವಾಗಿದೆ. ಜನರಲ್ ಹಾಸ್ಟಲಿನಲ್ಲಿ ಕ್ಯಾಂಟೀನ್ ಚೊಕ್ಕವಾಗಿಲ್ಲ ಇದು ಮಾನ್ಯ ಚನ್ನಬಸಪ್ಪನವರ ಅಧೀನದಲ್ಲಿದೆ. ಅವರು ಈ ರೀತಿ ಆಗುವುದಕ್ಕೆ ಎಡೆ ಕೊಡುವುದಿಲ್ಲವೆಂದು ಈ ಮಾತನ್ನು ಹೇಳುತ್ತಿದ್ದೇನೆ.

ಅಸೆಂಬ್ಲಿ ಅಧಿವೇಶನಗಳು ನಡೆಯುವ ಇದ್ದಾಗ ಲೆಜಿಸ್ಲೇಟರ್ಸ್ ಹೋಂನಲ್ಲಿ ಒಂದು ದಿವಸಕ್ಕೆ ಎರಡು ರೂಪಾಯಿ ರೂಂ ಬಾಡಿಗೆ ಹಾಕುತ್ತಾರೆ ಜನರಲ್ ಹಾಸ್ಟಲಿನಲ್ಲಿ ಆ ರೀತಿ ಇಲ್ಲ. ಇದಲ್ಲದೆ ಜನರಲ್ ಹಾಸ್ಟಲಿನಲ್ಲಿ ಲೋಕಲ್ ಕಾಲ್ಸ್‌ಗೆ ಕೂಡ ಚಾರ್ಜ್ ಮಾಡುತ್ತಾರೆ ಈ ರೀತಿಯ ತಾರತಮ್ಯ ಇರ ಬಾರದು. ಸದಸ್ಯರು ಎಲ್ಲಿಯೇ ಇರಲಿ, ಎಲ್ಲ ಸವಲತ್ತನ್ನೂ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಈ ರೀತಿ ಮಾರ್ಪಾಡು ಮಾಡಿ ಹುಕುಂ ಕೊಡಬೇಕೆಂಬ ಸೂಚನೆಯನ್ನು ಕೊಡುತ್ತ, ಸದಸ್ಯರಿಗೆ ಇರುವಂಥ ತೊಂದರೆಗಳ ನಿವಾರಣೆಗೆ ಮುಂದಿನ ಅಧಿವೇಶನದಿಂದಲಾದರೂ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಶಾಸಕರ ಊಟದ ವ್ಯವಸ್ಥೆ ಅತ್ಯಂತ ಅಸಮರ್ಪಕವಾಗಿದೆ. ಪ್ರತಿನಿತ್ಯ ನಾವು ಊಟ ಮಾಡುವುದಕ್ಕಾಗುವುದಿಲ್ಲ. ಇಲ್ಲಿ ಒಂದು ಚಿತ್ರಾನ್ನ, ಮೊಸರನ್ನ ತಿಂದುಕೊಂಡು ಕಾಲ ಕಳೆಯುತ್ತಿದ್ದೇವೆ ಒಂದು ಊಟ ಮಾಡುವುದಕ್ಕೆ ಒಂದೂವರೆ ರೂಪಾಯಿ ಕೊಡಬೇಕು. ಊಟಕ್ಕೆ ಹೋಗಿ ಬರಲು ರಿಕ್ಷಾ ಚಾರ್ಜ್ ಒಂದೂವರೆ ರೂಪಾಯಿ ಕೊಡಬೇಕಾಗಿದೆ ಬಂದಿದೆ. ಈಗ ಇರುವಂಥ ವ್ಯವಸ್ಥೆಯನ್ನು ಬದಲಾವಣೆ ಮಾಡದೆ ಇದ್ದರೆ ಹೇಗೆ ಸಹಿಸಬೇಕೋ ಗೊತ್ತಿಲ್ಲ.

ಶ್ರೀ ಎಸ್. ಎಂ. ಶೀರಾನಾಳಿ ಚಂದ್ರಶೇಖರ್.—ಮಾನ್ಯ ದೇವೇಗೌಡರು ಮತ್ತು ಕೋಣಂದೂರು ಲಿಂಗಪ್ಪನವರು ಹೇಳಿದುದನ್ನು ಸಮರ್ಥಿಸುತ್ತ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ನಾವು ಯಾರಿಗೂ ಫೋನ್ ಮಾಡುವುದಕ್ಕಾಗುವುದಿಲ್ಲ, ಲೈನ್ ಸರಿಯಾಗಿಲ್ಲ. ನಾವು ಫೋನ್ ಮಾಡಬೇಕಾದಾಗಲೆಲ್ಲ ಎಕ್ಸ್‌ಛೇಂಜಿಗೆ ಹೋಗಿ ಇಂಥ ನಂಬರ್ ಕೊಡಿ ಎಂದು ಹೇಳಬೇಕು. ರೂಮಿನಿಂದ ಮಾತನಾಡಿದರೆ ಒಂದು ಸಲವೂ ಕನೆಕ್ಷನ್ ಸಿಕ್ಕುತ್ತಲಿದಿಲ್ಲ. ಅದು ಒಂದು ಭಕ್ತ ಇದ್ದ ಹಾಗೆ ಇದೆ. ಊಟದ ವ್ಯವಸ್ಥೆ ಏನೇನೂ ಸರಿಯಿಲ್ಲ. ಪ್ರತಿ ದಿವಸ ನಾಲ್ಕೈದು ಮೈಲಿ ದೂರ ಹೋಗಿ ಊಟ ಮಾಡಿಕೊಂಡು ಬರಬೇಕು. ಲೆಜಿಸ್ಲೇಟರ್ಸ್ ಹೋಂಗೂ, ಜನರಲ್ ಹಾಸ್ಟಲ್‌ಗೂ ಎಷ್ಟೊಂದು ವ್ಯತ್ಯಾಸವಿದೆ, ತಾರತಮ್ಯವಿದೆ ಎನ್ನುವುದನ್ನು ನೋಡಿದರೆ ಗೊತ್ತಾಗುತ್ತದೆ. ಜನರಲ್ ಹಾಸ್ಟಲಿನಲ್ಲಿರುವ ವ್ಯವಸ್ಥೆಯನ್ನು ಉತ್ತಮ ಪಡಿಸಬೇಕು.

SRI D. B. KALMANKAR (Afzalpur).—From the beginning of this session we are facing with the water trouble in the General Hostel. But it has been too much in the last three days. Today I have seen Sri Konandur Lingappa in such a furious mood that he would have probably beaten if anybody had come in his way. So when there is shortage of such an essential thing as water supply, sometimes balance of mind of hon. Members is lost. Similarly we are facing the same trouble with regard to telephone calls. Unfortunately for us, you Madam Speaker is also not visiting the General Hostel. I remember when Sri Baliga was the Speaker he used to go every week to this hostel and make enquiries about the welfare of the hon. members. Eversince you have become the Speaker we have not seen you there. Probably if you go often it may help to improve the situation I request Sri H. M. Channabasappa not to allow the situation to drift. I hope he will look into the matters and see the patience of the hon. Members does not go out of control and things are set right.

10-30 A. M.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾವು ಈ ಮನೆಯಲ್ಲಿ ಈ ಬಗ್ಗೆ ಕೂಲಂಕಷವಾಗಿ ಚರ್ಚೆಮಾಡಿ, ಏನು ತೀರ್ಮಾನ ಮಾಡುತ್ತೇವೋ ಅದನ್ನು ಇಂಪ್ಲಿಮೆಂಟ್ ಮಾಡುವುದು ಹೌಸ್ ಕಮಿಟಿಯ ಮೆಂಬರ್ಸ್ ಮೇಲೆ ಇರುವುದಿಲ್ಲ. ಒಂದೊಂದಾಗಿ ಹೇಳುವುದಾದರೆ, ಟಿಲಿಫೋನ್ ಆಟೆಂಡ್ ಮಾಡುವುದಕ್ಕೆ ಕನ್ನಡ ಬಾರದೆ ಇರುವವರನ್ನು, ತಮಿಳುಭಾಷೆ ಮಾತನಾಡುವ ಜನರು, ಜನರಲ್ ಹಾಸ್ಪಲಿನಲ್ಲಿದ್ದಾರೆ. ಲೆಜಿಸ್ಲೇಚರ್ ಸೆಕ್ರೆಟರಿಯೇಟ್ ಕನೆಕ್ಷನ್ ಕೊಡಿ ಎಂದರೆ, ಮಹರಾಣಿ ಕಾಲೇಜು ಹಾಸ್ಪಲ್‌ಗೆ ಕೊಡುತ್ತಾರೆ.

ಅಧ್ಯಕ್ಷರು.—ಅವರು ಕನ್ನಡ ಬಾರದೆ ಇರುವವರು ಅಲ್ಲ, ಅವರ ಕಿವಿ ಸ್ವಲ್ಪ ಜಾಬು ಆಗಿರಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಅದು ನನಗೆ ತಿಳಿಯದು, ಆಮೇಲೆ ಮಾನ್ಯ ಸದಸ್ಯರುಗಳು ಕೆಲವರು ಹೇಳಿದರು, ನಾನ್ ವೆಜಿಟೇರಿಯನ್ ಊಟ ಚೆನ್ನಾಗಿರುತ್ತದೆ. ಇನ್ನು ಕೆಲವರು ವೆಜಿಟೇರಿಯನ್ ಊಟ ಚೆನ್ನಾಗಿರುತ್ತದೆ ಎಂದು. ಇದನ್ನು ಹೇಗೆ ವಿಮರ್ಶೆ ಮಾಡಬೇಕೋ, ಒಟ್ಟಿನಲ್ಲಿ ಹೇಳುವುದಾದರೆ.....

ಅಧ್ಯಕ್ಷರು.—ಒಟ್ಟಿನಲ್ಲಿ ಊಟ ಚೆನ್ನಾಗಿದೆ ಎಂದು ಆಯಿತು.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾವು ಇಲ್ಲಿ ತಬ್ಬಲಿಗಳಾಗಿದ್ದೇವೆ, ಊರಿಗೆ ಹೋದರೆ ತಂದೆತಾಯಿಗಳು ನೋಡಿಕೊಳ್ಳುತ್ತಾರೆ, ಇಲ್ಲಿ ತಂದೆತಾಯಿ, ಲೀಡರ್ ಆಫ್ ದಿ ಹೌಸ್ ಮತ್ತು ಸ್ಪೀಕರ್; ನೀವು ಇಬ್ಬರೂ ಊಟ ಹೇಗೆ ಇದೆ ಎಂದು ಎಂದೂ ಕೇಳುವುದಿಲ್ಲ. ಯಾರೂ ವಿಚಾರಿಸುತ್ತಿಲ್ಲ, ನಮ್ಮನ್ನು ತಬ್ಬಲಿ ಮಾಡಬೇಡಿ, ನಿಮ್ಮ ಮಕ್ಕಳ ಹಾಗೆ ಚೆನ್ನಾಗಿ ನೋಡಿಕೊಳ್ಳಿ, ಅಲ್ಲಿ ಸರಿಯಾದ ವ್ಯವಸ್ಥೆ ಮಾಡಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಕೊನೆಗೆ ಎಲ್ಲಿಗೆ ಹೋಗಬೇಕಾಗುತ್ತದೆ ಎಂದರೆ, ನಿಮಗೆ ಮನೆ ಇದೆ ನಿಮ್ಮ ಮನೆಗೆ ಬರಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೂ ಸ್ವಂತ ಮನೆ ಇರಬಹುದು.

ಶ್ರೀ ವಾಟಾಳ್ ನಾಗರಾಜ್.—ನನಗೆ ಸ್ವಂತ ಮನೆ ಇಲ್ಲ, ಬಾಡಿಗೆ ಮನೆಯಲ್ಲಿದ್ದೇನೆ.

ಅಧ್ಯಕ್ಷರು.—ಮನೆ ಇಟ್ಟುಕೊಂಡಿರುವಾಗ ಜನರಲ್ ಹಾಸ್ಪಲ್ ಅಥವಾ ಲೆಜಿಸ್ಲೇಚರ್ ಹೋಂನಲ್ಲಿ ಹೇಗೆ ಇರುವುದಕ್ಕೆ ಸಾಧ್ಯ ?

ಶ್ರೀ ವಾಟಾಳ್ ನಾಗರಾಜ್.—ನಾನು ಬೇರೆಯವರ ಮನೆಯಲ್ಲಿದ್ದೇನೆ. ಈಗ ಮುಂದಿನ ಸಭೆ ಪ್ರಾರಂಭವಾಗುವುದರೊಳಗೆ ಇದನ್ನು ಸರಿಪಡಿಸದಿದ್ದರೆ, ನಾವು ನಿಮ್ಮ ಮನೆಗೆ ಊಟಕ್ಕೆ ಮೆರವಣಿಗೆ ಮಾಡಿಕೊಂಡು ಬರುತ್ತೇವೆ.